# 2

# ಆಧ್ಯಾತ್ಮಿಕತೆ (2)

ನಾವು ಆತ್ಮಿಕತೆಯಲ್ಲಿ - ಒಂದು "ಬುಲ್ ಮಾರ್ಕೇಟನ್ನು" - ಉನ್ನತ ಮಟ್ಟದ ಆಸಕ್ತಿಯನ್ನು ಮತ್ತು ಚಟುವಟಿಕೆಯನ್ನು - ನೋಡುತ್ತಿದ್ದೇವೆ. ಅತೀ ಹೆಚ್ಚಾದದ್ದು ಮೂಢನಂಬಿಕೆಯುಳ್ಳದ್ದೂ ಬೆಲೆಯಿಲ್ಲದ್ದೂ ಆಗಿರುತ್ತದೆ. ಆಳವಾದ ಆತ್ಮಿಕತೆಯು ಇನ್ನೊಂದು ಬಾಲಿಶ ಆಟವಾಗಿ ಕೆಳಗಿಳಿಯಬಾರದು.

ಹಿಂದಿನ ಪಾಠದಿಂದ ಕಪಟ ಆತ್ಮಿಕತೆಯ ನಮ್ಮ ಚರ್ಚೆಯನ್ನು ಮುಂದುವರಿಸೋಣ, ಆತ್ಮಿಕತೆಯು ಇನ್ನೂ ಏನು *ಆಗಿರುವದಿಲ್ಲ* ಎಂಬುದನ್ನು ಗಮನಿಸೋಣ:

3. ಅದು ಅಜ್ಞಾನ ಮತ್ತು ಮೂಢನಂಬಿಕೆ ಆಗಿರುವದಿಲ್ಲ. ಇಂದು ಜನರು ತಮ್ಮ ಕಣ್ಣುಗಳಿಂದ ಕೇಳುತ್ತಾರೆ ಮತ್ತು ತಮ್ಮ ಭಾವನೆಗಳಿಂದ ಯೋಚಿಸುತ್ತಾರೆ. ಆತ್ಮಿಕತೆಯು ಭಾವನಾಪರವಾಗಿರ ಬೇಕಾಗಿದ್ದರೆ ಅದು ತರ್ಕ ಸಮ್ಮತವಾದದ್ದಾಗಿರಬೇಕು, "ನಾನು ಭಾವಿಸುತ್ತೇನೆ, ಅದರಿಂದ ನಾನು ನಂಬುತ್ತೇನೆ" ಎಂದು ಜನರು ಹೇಳುತ್ತಾರೆ. "ಪ್ರತಿಯೊಬ್ಬನೂ ಕ್ರೈಸ್ತನಾಗಿರುವಾಗ, ಯಾವನೂ ಕ್ರೈಸ್ತನಾಗಿರುವದಿಲ್ಲ." ಮನಸ್ಸುಗಳನ್ನು ಉಣ್ಣಿಸದೇ ನೀನು "ಹೃದಯಗಳನ್ನು ಬೆಚ್ಚಗಿಡಲಾರಿ." ಪರಿಶುದ್ಧನಾಗಿರದೇ ಸಂತೋಷವುಳ್ಳವನಾಗಿರಲು ಪ್ರಯತ್ನಿಸಬೇಡ.

4. ಅದು ರಹಸ್ಯೋಪದೇಶವಲ್ಲ. ಸಹೋದರರು ಯಾವಾಗಲೂ "ರಹಸ್ಯವಾದಕ್ಕೆ ಅಪಾರ್ಥವಾದಕ್ಕೆ ಮತ್ತು ಅರ್ಥಮಾಡಿಕೊಳ್ಳಲಿರದಾದದ್ದಕ್ಕೆ" ಬಲಿಯಾಗಿದ್ದಾರೆ. ಪ್ರಯೋಜನವಿಲ್ಲದ ಆತ್ಮಿಕ ಆಹಾರವು ಕ್ರೈಸ್ತರನ್ನು ಪ್ರೌಢರಾಗಿ ಮಾಡುವುದಿಲ್ಲ. ಯು.ಎಸ್. ಪ್ರಥಮ ಮಹಿಳೆ ನ್ಯಾನ್ಸಿ ರೇಗನ್‌ಳಿಗೆ ವೈಟ್ ಹೌಸಿನಲ್ಲಿ ಒಬ್ಬ ಮನೋವ್ಯಾಧಿ ಚಿಕಿತ್ಸಕನು ಇದ್ದನು. ಎಲ್ಲಾ ತಪ್ಪು ಸ್ಥಳಗಳಲ್ಲಿ ಆತ್ಮಿಕತೆಗಾಗಿ ಜನರು ಹುಡುಕುತ್ತಿರುತ್ತಾರೆ. ಆಸಕ್ತಿಯು "ಒಳಗೆ" ಇರುತ್ತದೆ. ಜನರು "ದೇವರ ಅನುಭವಗಳನ್ನು" ಬಯಸುತ್ತಾರೆ, ಆದರೆ ದೇವರನ್ನು ಅಲ್ಲ. ನಮಗೆ "ಆತ್ಮನ ಯುಗವಿರುವುದೋ" ಇಲ್ಲವೇ "ಯುಗದ ಆತ್ಮನಿರುವನೋ"? "ಯೇಸುವಿನ ಸ್ವಲ್ಪ ಭಾಗ" ಝೋನ್‌ನ ಒಂದು ಭಾಗ, "New-Ageism"ದ ವಿಷಯಗಳು, ಕೆಲವೊಂದು ಮಹಿಳಾವಾದದ "Sophia," ಸ್ಪಟಿಕಗಳು, ಜಲಸಂಧಿ, ಮಂತ್ರಗಳು, ಆಧ್ಯಾತ್ಮಿಕ ವಿಷಯಗಳು, ಗುರುಗಳು: ಈ ವಿಧಾನಗಳು ಮೂಢ ನಂಬಿಕೆಯಲ್ಲಿ ಪರಿಣಾಮಗೊಳ್ಳುತ್ತವೆ, ಆದರೆ ಆಧ್ಯಾತ್ಮಿಕತೆಯಲ್ಲಿ ಅಲ್ಲ, ಸಮಿಕ್ಷೆ ನಡಿಸಿದ ಪ್ರತಿ ಶತ ಇಪ್ಪತ್ತರಷ್ಟು ಜನರು ವರ್ಷದೊಳಗಾಗಿ ತಾವು ದೇವರಿಂದ ಪ್ರಕಟನೆಯನ್ನು ಹೊಂದಿದ್ದೇವೆಂದು ಹೇಳಿದರು. ಪ್ರತಿ ಶತ ಮೂವತ್ಮೂರರಷ್ಟು ಜನರು ರಹಸ್ಯ ಅನುಭವಗಳನ್ನು ಹೊಂದಿರುವದಾಗಿ ಹೇಳಿದರು. ಪರಿಶುದ್ಧ ಬರಹಗಳನ್ನು ಬೋಧಿಸುವ ಮನುಷ್ಯನು, ತನಗೆ "ಅನುಭವ" ಇರುವದೆಂದು ನಂಬಿದವನೊಂದಿಗೆ ಸಂಪರ್ಕ ಹೊಂದುವದನ್ನು ಕಳೆದುಕೊಂಡಿದ್ದಾನೆ.

ಆತ್ಮಿಕತೆಯು *ಏನಾಗಿರುವದೆಂಬುದರ* ಕಡೆಗೆ ಈಗ ನೋಡೋಣ:

1. ಅದು ತರ್ಕ ಸಮ್ಮತವಾದ ವಿಷಯವಾಗಿದೆ. ಆತ್ಮಿಕತೆಯು ಸತ್ಯದಿಂದ ಪ್ರಾರಂಭಿಸಲ್ಪಟ್ಟು, ಬೆಳಿಸಲ್ಪಡತಕ್ಕದ್ದು. ಮನಸ್ಸಾಕ್ಷಿಯು ಸಂಕಲ್ಪದ ಮೇಲೆ ಕಟ್ಟಲ್ಪಟ್ಟಿರುತ್ತದೆ; ಸಂಕಲ್ಪವು ಸತ್ಯದ ಮೇಲೆ ಕಟ್ಟಲ್ಪಟ್ಟಿರುತ್ತದೆ. "ಸತ್ಯವಿಲ್ಲದೇ ಆತ್ಮಿಕತೆಯು ವ್ಯರ್ಥವಾದದ್ದಾಗುತ್ತದೆ." ಒಬ್ಬ ಮನುಷ್ಯನು ಆತ್ಮಿಕತೆಯುಳ್ಳವನಾಗಿರಲು

ಕೇಳತಕ್ಕದ್ದು, ಯೋಚಿಸತಕ್ಕದ್ದು ಮತ್ತು ಸತ್ಯವನ್ನು ತಿಳಿಯತಕ್ಕದ್ದು. ತರ್ಕಸಮ್ಮತಿಯು ಮಾನನೆತೆಗೆ ಚುಕ್ಕಾಣಿಯಾಗಿದೆ. ಆತ್ಮಿಕತೆಯು, ಮೊದಲನೆಯದಾಗಿ, ತರ್ಕ ಸಮ್ಮತ ವಾದದ್ದಾಗಿದೆ.

2. ಅದು ಬೈಬಲ್ ತಳಹದಿಯುಳ್ಳದ್ದಾಗಿದೆ. ದೇವರೊಂದಿಗೆ ಆತ್ಮಿಕ ಸಂಬಂಧವು ಪರಿಶುದ್ಧ ಬರಹಗಳನ್ನು ಬಿಟ್ಟು ಅಸ್ತಿತ್ವದಲ್ಲಿರಲಾರದು. ಆತ್ಮಿಕತೆಯು "ವಾಕ್ಯ ಕೇಂದ್ರ"ವಾದದ್ದು ಆಗಿರುತ್ತದೆ. ತಾನು ಪಾಪ ಮಾಡದಂತೆ ದಾವಿದನು ತನ್ನ ಹೃದಯದಲ್ಲಿ ವಾಕ್ಯವನ್ನು ಶೇಖರಿಸಿ ಇಟ್ಟುಕೊಂಡಿದ್ದನು (ಕೀರ್ತನೆ 119:11). ''ದೇವರು ನನ್ನೊಂದಿಗೆ ಮಾತಾಡಿದನು'' ಎಂದು ಜನರು ಹೇಳುತ್ತಾರೆ. "ಅವರು ಪ್ರವಾದಿ ಗಳೋ"? ಬೈಬಲು ಸಾಕಷ್ಟು ಆಗಿರುವದಿಲ್ಲವೋ? ಅವರ ''ಪ್ರಕಟನೆಯು,'' ಪರಿಶುದ್ಧ ಬರಹಗಳಿಗೆ ಸಮಾನವಾಗಿರುವುದೋ? ದೇವರಲ್ಲಿ ನಂಬಿಕೆಯು ಒಂದು ತೀರ್ಮಾನ ವಾಗಿದೆ, ಒಂದು ಮನೋಭಾವವಾಗಿರುವದಿಲ್ಲ. ನಾವು ದೇವರನ್ನು ನಂಬಬಹುದೋ? ನಾವು ಬೈಬಲಿನಲ್ಲಿ ನಂಬಿಕೆಯಿಡಬಹುದೋ? ನಾವು ಸಭೆಯನ್ನು ಪ್ರೀತಿಸುತ್ತೇವೆಯೋ? ಈ ಪ್ರಶ್ನೆಗಳಿಗೆ ಉತ್ತರಗಳು ನಮ್ಮ ಆತ್ಮಿಕತೆಯ ಆಳವನ್ನೂ ಸ್ಥಿರತೆಯನ್ನೂ ನಿರ್ಣಯಿಸುತ್ತವೆ.

ಲೌಕಿಕ ಗುಂಪಿಗೆ ಪ್ರಸಂಗಿಸುವದಕ್ಕೆ ದೇವರು ಆಮೋಸನನ್ನು ಕಳುಹಿಸಿದನು. ಅವರ ಮೂಲ ಸಮಸ್ಯೆಯು ಯಾವುದಾಗಿತ್ತು? ದೇಶದಲ್ಲಿ ಕ್ಷಾಮವಿದೆಯೆಂದು ಆಮೋಸನು ಹೇಳಿದನು - ಅದು ಆಹಾರದ ಕ್ಷಾಮವಲ್ಲ, ಆದರೆ ಕರ್ತನ ವಾಕ್ಯವನ್ನು ಕೇಳುವದಕ್ಕಾಗಿದ್ದ ಕ್ಷಾಮವಾಗಿತ್ತು (ಆಮೋಸ 8:11). "ಯಜಮಾನನ ಮೇಜಿನ'' ಬಳಿಯಲ್ಲಿ ಸಹೋದರರು ಹಸಿವೆಯಿಂದ ಬಳಲುತ್ತಿದ್ದರು. ನಮ್ಮ ಜ್ಞಾನದ ಕೊರತೆಯಿಂದ ನಾವು ನಾಶಪಡಿಸಲ್ಪಟ್ಟಿದ್ದೇವೆ (ಹೋಶೇಯ 4:6). ಕ್ರೈಸ್ತರು ವಾಕ್ಯದಿಂದ ಹುಟ್ಟಿದ್ದಾರೆ; ಅವರು ವಾಕ್ಯದಿಂದ ಬೆಳೆಯುತ್ತಾರೆ.

3. ಅದು ಪ್ರಾಮಾಣಿಕತೆಯುಳ್ಳದ್ದು (ಅಧಿಕೃತವಾದದ್ದು, ನಿಜವಾದದ್ದು, ವಾಸ್ತವಿಕವಾದದ್ದು). ಆರಾಧನೆಯನ್ನು ಕುರಿತು ಮಹಾಸತ್ಯವು ಯಾಕೋಬನ ಬಾವಿಯ ಬಳಿಯಲ್ಲಿ ಯೇಸುವಿನಿಂದ ಬೋಧಿಸಲ್ಪಟ್ಟಿತು: "ದೇವರು ಆತ್ಮ ಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸ ಬೇಕು'' (ಯೋಹಾನ 4:24). ಸತ್ಯವು ಸತ್ಯವಾಗಿದೆ, ಆದರೆ ''ಆತ್ಮವು'' ಯಾವುದು? *ಪ್ರಾಮಾಣಿಕತೆ*! (ನಿಷ್ಕಾಪಟ್ಯವೋ?) ಇಸ್ರಾಯೇಲ್ಯರ ಅರ್ಪಣೆಗಳ ಬಗ್ಗೆ ದೇವರು "ಬೇಸರಗೊಂಡನು'' (ನೋಡಿರಿ ಯೆಶಾಯ 29:13). ಯಾಕೆ? ಜನರು ಕಪಟಿಗಳಾಗಿದ್ದರು. ವ್ಯರ್ಥವಾಗಿ ಅವರು ದೇವರನ್ನು ಆರಾಧಿಸಿದರು (ಮತ್ತಾಯ 15:8, 9). ಆತ್ಮದಲ್ಲಿ ಶುದ್ಧರಾಗಿರುವವರು ದೇವರನ್ನು ನೋಡುವರು (ಮತ್ತಾಯ 5:8). ಆತ್ಮಿಕತೆಯು ಶುದ್ಧವಾದ ಮತ್ತು ಪ್ರಾಮಾಣಿಕವಾದ ಹೃದಯದಿಂದ ಪ್ರಾರಂಭವಾಗುತ್ತದೆ, ನಮ್ಮನ್ನೆ ಹುಡುಕಿಕೊಳ್ಳದೇ ನಾವೇ ಆತನನ್ನು ಹುಡುಕುತ್ತೇವೆ. "ನಿನ್ನ ಚಿತ್ತವು ನೆರವೇರಲಿ'' (ಮತ್ತಾಯ 6:10; 26:42). ದೈವವಾಗಿರಲು ಪ್ರಯತ್ನಿಸಬೇಡಿ; ಅದು ಅಸಾಧ್ಯ. ಮಾನವರಾಗಿರ್ರಿ. ನಿಮ್ಮಷ್ಟಕ್ಕೆ ನೀವೇ ಇರ್ರಿ; ನೀವು ಬೇರೆ ಯಾರೂ ಆಗಿರಲಾರಿರಿ.

4. ಅದು ದೀನತೆಯಾಗಿದೆ. ಆತ್ಮಿಕತೆಯ ತಿರುಳು ಅವಲಂಭನೆಯಾಗಿದೆ. ಆತ್ಮಿಕತೆಯನ್ನು ಹೊಂದಿಕೊಳ್ಳುವುದು ನಿಚ್ಚಣಿಕೆಯ ಮೇಲೆ ಏರುವಂತೆ ಇದೆಯೆಂದು ಹೆಚ್ಚಾದವರು ಯೋಚಿಸುತ್ತಾರೆ. ''ಆತ್ಮಿಕ ನಿಚ್ಚಣಿಕೆ'' ಇರುವದಿಲ್ಲ. ದೇವರು ಕಲ್ವಾರಿಯಲ್ಲಿ ಒಂದು ಕ್ರೂಜೆಯನ್ನು ಇಟ್ಟನು, ಆದರೆ ಒಂದು ನಿಚ್ಚಣಿಕೆಯನ್ನಲ್ಲ! ಯಾಕೋಬನು ''ಯಾಕೋಬನ ನಿಚ್ಚಣಿಕೆಯನ್ನು'' ಹತ್ತಿ ಹೋಗಲಿಲ್ಲ; ದೇವದೂತರು ಹತ್ತುತ್ತಾ ಇಳಿಯುತ್ತಾ ಇದ್ದರು (ಆದಿಕಾಂಡ 28:12). ಆತ್ಮಿಕತೆಗೆ ಮಾರ್ಗವು ಮೇಲಕ್ಕೆ

ಇರುವದಿಲ್ಲ, ಆದರೆ ಕೆಳಮುಖವಾಗಿರುವುದು. *ಮೊದಲು ದೀನತೆಯನ್ನು ಕೈಕೊಳ್ಳಿರಿ!* ಆತ್ಮಿಕತೆಯು ''ಸ್ವತಂತ್ರವಾಗಿರುವುದಲ್ಲ''; ಆತ್ಮಿಕತೆಯು ಸಹಾಯ ಹೀನತೆ (ಅವಲಂಭನೆ) ಯಾಗಿರುತ್ತದೆ. ಪ್ರಾರ್ಥನೆಯು ನಮ್ಮ ಸಹಾಯಹೀನತೆಯ ಧ್ವನಿಯಾಗಿರುತ್ತದೆ. ಆತ್ಮಿಕವಾಗಿ ಗರ್ವಿಗಳಾಗಿರುವ ಜನರು ಆತ್ಮಿಕತೆಯುಳ್ಳ ವರಾಗಿರುವದಿಲ್ಲ. ಆತ್ಮಿಕತೆಯು ಬೌದ್ಧಿಕತೆಗೆ ವಿರುದ್ಧವಾಗಿರುವಂಥದ್ದಲ್ಲ. ಆತ್ಮಿಕತೆಯು ಅತೀ ಹೊಸದಾದ್ದಲ್ಲ - ಅದು ಅತೀ ಪುರಾತನ ಸತ್ಯವಾಗಿದೆ. (ಅಧ್ಯಾಯ 3ರಲ್ಲಿ ಹೆಚ್ಚಿನವುಗಳನ್ನು ನೋಡಿರಿ.)

◇◇◇◇◇◇◇◇◇

# ''ನಂಬುವವರಾಗಿ ನಡೆಯುವುದು''

## ಇಬ್ರಿಯ 11[1]

*''ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯುತ್ತೇವೆ'' (2 ಕೊರಿಂಥ 5:7).*

ದೇವರೊಂದಿಗೆ ನಮ್ಮ ಅನುದಿನದ ನಡೆಯುವಿಕೆಯು ''ನಂಬುವವರಾಗಿ ನಡೆಯುವುದಾಗಿದೆ.'' ದೇವರಲ್ಲಿಯ ನಮ್ಮ ನಂಬಿಕೆಯ ಕಾರಣದಿಂದ, ನಾವು ದೇವರೊಂದಿಗೆ ನಡೆಯುತ್ತೇವೆ. ಒಂದು ಕ್ಷಣಕ್ಕೂ ನಾವು ಪರಿಪೂರ್ಣರಾಗಿರಲಾರೆವು ಆದರೆ, ನಾವು ಒಂದು ದಿನಕ್ಕೆ ಒಂದೇ ಫಲಕ್ಕೆ ನಾವು ನಂಬಿಗಸ್ತರಾಗಿರಬಹುದು. ನಾವು ಪ್ರತಿದಿನ ನಂಬಿಗಸ್ತರಾಗಿರುವಾಗ, ಯಾವ ದಿನ ಕ್ರಿಸ್ತನು ಹಿಂದಿರುಗಿ ಬರುವನೆಂಬುದು ಸಂಬಂಧಿಸಿರುವದಿಲ್ಲ. ಪರಲೋಕದ ''ಪ್ರಸಿದ್ಧಿಯ ಘನತೆಯು'' ತಮ್ಮ ವಿಶ್ವಾಸವನ್ನು ಜೀವಿಸಿದ ಚರಿತ್ರೆಯಲ್ಲಿಯ ಮಹಾ ದೇವಜನರನ್ನು ತೋರಿಸುತ್ತದೆ. ಯಾವುದು ಸ್ಪಷ್ಟ ವಾಗಿ ತಪ್ಪಿಸಿಕೊಂಡಿದೆ ಎಂಬುದನ್ನು - ಅತಿ ಶ್ರೇಷ್ಠ ಬುದ್ಧಿವಂತಿಕೆ, ಸ್ವಗೌರವ, ನಯವಾದ ವ್ಯಕ್ತಿತ್ವ, ತಲಾಂತು, ಯಶಸ್ಸು - ಗಮನಿಸಿರಿ. ನಾವು ಯಶಸ್ವಿಯಾಗಿರ ಬೇಕೆಂದು ದೇವರು ಎಂದೂ ಆಜ್ಞಾಪಿಸಲಿಲ್ಲ, ಆದರೆ ಆತನು ನಂಬಿಗಸ್ತಿಕೆಯನ್ನು ಕೇಳುತ್ತಾನೆ. ದೇವರು ಸಮಾಂತರ ಸಾಮರ್ಥ್ಯಗಳನ್ನು ಕೇಳುವದಿಲ್ಲ; ಆತನು ಸಮಾಂತರ ನಂಬಿಕೆಯನ್ನು ಕೇಳುವದಿಲ್ಲ - ಕೇವಲ ನಂಬಿಗಸ್ತಿಕೆಯನ್ನು ಕೇಳುತ್ತಾನೆ. ಈಗಲೇ ನೀವು ನಂಬಿಗಸ್ತರಾಗಿರುವಿರೋ?

### ಜೀವನವು ಏನಾಗಿರುವುದೋ ಅದು ನಂಬಿಕೆಯಾಗಿದೆ

ನಂಬಿಕೆಯು ಅಲಕ್ಷಿಸಲ್ಪಡದಷ್ಟು, ದೊಡ್ಡದಾಗಿದೆ. ಅದೇನಾಗಿದೆ ಮತ್ತು ಅದೇನು ಮಾಡುತ್ತದೆ ಎಂಬುದನ್ನು ನಾವು ತಿಳಿಯಬೇಕಾಗಿದೆ. ನಾವು ತಿಳಿದಿರಲಿ, ತಿಳಿಯದೇ ಇರಲಿ ನಾವೆಲ್ಲರೂ ''ನಮ್ಮ ನಂಬಿಕೆಯಿಂದ'' ನಡೆಯುತ್ತೇವೆ. ಪ್ರತಿಯೊಂದು ವಿಚಾರವು, ಪ್ರತಿಯೊಂದು ಕಾರ್ಯವು ನಮ್ಮ ನಂಬಿಕೆಯನ್ನು ಪ್ರದರ್ಶಿಸುತ್ತದೆ. ನಂಬಿಕೆಯು ಜೀವನಕ್ಕಾಗಿರುವುದು; ಜೀವನವು ನಂಬಿಕೆಯಾಗಿರುವುದು. ಮನುಷ್ಯನು ಏನು ನಂಬುವನೋ ಅದಾಗಿರುವನು. ''ನನ್ನ ನಂಬಿಕೆಗೆ ತಕ್ಕಂತೆ ನಾನು ಜೀವಿ ಸುವದಿಲ್ಲ'' ಎಂದು ಕೆಲವರು ಶೋಕಿಸುತ್ತಾರೆ. ಹೌದು, ನೀನೂ ಹಾಗೆ ಮಾಡುತ್ತೀ! ಸೋಲು ನಿನ್ನ ನಂಬಿಕೆಯಲ್ಲಿರುವುದು. ನೀನು ಹೇಗೆ ಜೀವಿಸುವಿಯೋ, ಹಾಗೆ ನೀನು

ನಂಬುತ್ತೀ. ನಾವು ನಂಬುವಂಥದ್ದು ನಾವು ಮಾಡುವಂಥದ್ದನ್ನು ನಿರ್ಧರಿಸುತ್ತದೆ. ನಿನ್ನ ನಂಬಿಕೆಗಳು ನಿನ್ನ ನಡತೆಯನ್ನು ನಿರ್ಧರಿಸದಿದ್ದರೆ, ನಂಬಿಕೆಗಳು ಯಾಕೆ ಇರಬೇಕು? ನಂಬಿಕೆಯು "ನಂಬುವದರಲ್ಲಿ ನಂಬುವುದು" ಆಗಿರುವದಿಲ್ಲ. ನಂಬಿಕೆಗೆ ಒಂದು ಉದ್ದೇಶವಿದೆ. ನೀವು ಯಾರಲ್ಲಿಯಾದರೂ ಇಲ್ಲವೇ ಯಾವುದರಲ್ಲಿಯಾದರೂ ನಂಬುತ್ತೀರಿ. "ನಂಬುವದರಲ್ಲಿ ನಂಬುವುದು" ಮ್ಯಾಜಿಕ್, ಮೂಢನಂಬಿಕೆ, ಮೂರ್ಖತನವಾಗಿದೆ. ನಂಬಿಕೆಯು ಮಾತ್ರವೇ ರಕ್ಷಿಸುವದಿಲ್ಲ; ದೇವರು *ರಕ್ಷಿಸುತ್ತಾನೆ*! ನಂಬಿಕೆಯು ದೇವರನ್ನು ನಂಬುತ್ತದೆ.

ಮನುಷ್ಯನ ನಂಬಿಕೆಯು ದೇವರ ಶಕ್ತಿಗಿಂತ ಹೆಚ್ಚು ಬಲವುಳ್ಳದ್ದಾಗಿರುವದಿಲ್ಲ. ನಮ್ಮ ನಂಬಿಕೆಗೆ ಕಾರಣನಾದ ಕ್ರಿಸ್ತನಿಗಿಂತ ಎಷ್ಟೋ ಹೆಚ್ಚಾಗಿ ಇಂದು ನಮ್ಮ ನಂಬಿಕೆಯ ಬಗ್ಗೆ ಮಾತಾಡುತ್ತೇವೆ. ನಿನ್ನ ವಿಶ್ವಾಸದ ಬಗ್ಗೆ ಕೊಚ್ಚಿಕೊಳ್ಳಬೇಡ, ಬಲ ಮತ್ತು ಮಹಿಮೆಯು ವಿಶ್ವಾಸಿಯಲ್ಲಿರುವದಿಲ್ಲ, ಉದ್ದೇಶಿತ ವ್ಯಕ್ತಿಯಲ್ಲಿರುವುದು. ನಂಬಿಕೆಯು ಕಾರ್ಯಗಳಿಗಿಂತ ಹೆಚ್ಚು ಪ್ರಶಾಂಸಾರ್ಹವಾದದ್ದಾಗಿರುವದಿಲ್ಲ.

ನಾವು ಹೇಳುವ ಮತ್ತು ಮಾಡುವ ಪ್ರತಿಯೊಂದು ನಮ್ಮ ನಂಬಿಕೆಯಿಂದ ಪರಿಣಾಮಗೊಳ್ಳುವುದು. ರೋಡಿನ ಒಂದು ನಿಶ್ಚಿತವಾದ ಬದಿಯ ಮೇಲೆ ಯಾಕೆ ವಾಹನವನ್ನು ನಡಿಸುತ್ತೇವೆ? ಯಾಕೆಂದರೆ ಕಾನೂನಿನ ಅಧಿಕಾರದಲ್ಲಿ ಮತ್ತು ರೋಡಿನ ತಪ್ಪಾದ ಬದಿಯಲ್ಲಿ ವಾಹನ ಚಲಿಸುವದರ ಗಂಡಾಂತರದಲ್ಲಿ ನಾವು ನಂಬುತ್ತೇವೆ! ನಾವು ತಲಾಂತಿನಲ್ಲಿ, ಶಿಕ್ಷಣದಲ್ಲಿ, ಸಿದ್ಧತೆಯಲ್ಲಿ, ಜನರಲ್ಲಿ, ಭವಿಷ್ಯದಲ್ಲಿ, ಹಣದಲ್ಲಿ, ಯಶಸ್ಸಿನಲ್ಲಿ, ಪ್ರಸಿದ್ಧಿಯಲ್ಲಿ, "ರಾಜಕೀಯ ಸರಿಯಾಗಿರುವಿಕೆಯಲ್ಲಿ," ಸಂಸ್ಕೃತಿಯಲ್ಲಿ, ಕುಟುಂಬದಲ್ಲಿ, ರಾಜಕೀಯದಲ್ಲಿ, ಆಹಾರದಲ್ಲಿ, ವ್ಯಾಯಮದಲ್ಲಿ, ನಮ್ಮ ಧ್ವಜದಲ್ಲಿ, ಚರಿತ್ರೆಯಲ್ಲಿ, ಒಳ್ಳೆಯ ತನದಲ್ಲಿ, ಪ್ರಾಮಾಣಿಕತೆಯಲ್ಲಿ, ಗೌರವದಲ್ಲಿ, ಮತ್ತು ಇತರ ಅನೇಕ ಸಂಗತಿಗಳಲ್ಲಿ ನಾವು ನಂಬುತ್ತೇವೆ: ನಾವು ವೈದ್ಯರನ್ನು ನಂಬುವದರಿಂದ ಚಿಕಿತ್ಸೆಗಳಿಗೆ ಮತ್ತು ಶಸ್ತ್ರ ಚಿಕಿತ್ಸೆಗಳಿಗೆ ಒಪ್ಪಿಸಿಕೊಡುತ್ತೇವೆ. ವಿಮಾನ ಚಾಲಕರನ್ನು ನಂಬುವದರಿಂದ ವಿಮಾನಗಳಲ್ಲಿ ಪ್ರಯಾಣ ಮಾಡುತ್ತೇವೆ.

ವಿಶ್ವಾಸವು ನಮ್ಮನ್ನು (ವಿಶೇಷವಾಗಿ ಯುವಕರನ್ನು) ವಿಲಕ್ಷಣವಾದ ಸಂಗತಿಗಳನ್ನು ಮಾಡಲಿಕ್ಕೆ ಕಾರಣವಾಗುತ್ತದೆ ನಿಮ್ಮ ತಲೆಯನ್ನು ವಿಚಿತ್ರವಾಗಿ ಬೋಳಿಸಿಕೊಳ್ಳುವುದು ಇಲ್ಲವೇ ವಿಚಿತ್ರವಾದ ಉಡುಪು ಧರಿಸುವುದು ಯಾಕೆ? ಯಾಕಂದರೆ ಅದು ನಮ್ಮನ್ನು ಸ್ವೀಕರಿಸುತ್ತದೆ, ತಮಾಷೆಯಾಗಿರುತ್ತದೆ, ಯಶಸ್ವಿಯಾಗಿರುತ್ತದೆ ಎಂದು ನಾವು ನಂಬುತ್ತೇವೆ. ಐಶ್ವರ್ಯವಂತ ಗುಂಪುಗಳ ಒತ್ತಡವೂ ಪ್ರೌಢರ ಮೇಲೆ ಪರಿಣಾಮ ಮಾಡುತ್ತದೆ. "ನಾವು ಮೆಚ್ಚದ ಜನರನ್ನು ಮೂರ್ಖರನ್ನಾಗಿ ಮಾಡುವ ಅಗತ್ಯತೆಯಿಲ್ಲದ ಸಂಗತಿಗಳನ್ನು ಕೊಂಡುಕೊಳ್ಳಬೇಕಾಗಿರದೆ ಇರಬೇಕಾದವುಗಳಿಗೆ ನಾವು ಹಣವನ್ನು ಖರ್ಚುಮಾಡುತ್ತೇವೆ" ಎಂದು ಯಾರೋ ಒಬ್ಬರು ಗಮನಿಸಿದ್ದಾರೆ. ನಾವು ಸಾಲದಲ್ಲಿ ಯಾಕೆ ಇದ್ದೇವೆ? ಯಾಕಂದರೆ ನಮಗೆ ಕೆಲವೊಂದು ಸ್ವಾಸ್ತ್ಯಗಳಿರಬೇಕೆಂದು ನಾವು ನಂಬಿದೆವು. ವಾರಗಳ ವರೆಗೆ, ಹಗಲೂ ರಾತ್ರಿ, ಪಂದ್ಯಾಟದ ಘಟನೆಗಳಿಗಾಗಿ ಟಿಕೇಟುಗಳನ್ನು ಕೊಳ್ಳಲಿಕ್ಕೆ, ಚಲನ ಚಿತ್ರಗಳಿಗೆ ಇಲ್ಲವೇ ರೋಕ್ ಕೊನ್ಸರ್ಟ್‌ಗಳಿಗೆ ಟಿಕೇಟುಗಳನ್ನು ಪಡೆಯಲು ಹೊರಗೆ ಬಿಡಾರ ಬಿಡಬೇಕು. ಯಾಕಂದರೆ ನಾವು ನಂಬುತ್ತೇವೆ ವಿಷಯವು ನಂಬಿಕೆಯಾಗಿರುವದಿಲ್ಲ. ಯಾಕಂದರೆ ನಾವೆಲ್ಲರೂ ನಂಬುತ್ತೇವೆ - ಆದರೆ ಯಾರಲ್ಲಿ? ನಾವು ಯಾವುದರಲ್ಲಿ ನಂಬುತ್ತೇವೆ? ನಾವು ಏನನ್ನು ನಂಬುತ್ತೇವೆ ಮತ್ತು ಅದನ್ನು ಯಾಕೆ ನಂಬುತ್ತೇವೆ ಎಂಬುದನ್ನು ತಿಳಿಯುವದರ ಅಗತ್ಯತೆಯಿದೆ.

ನಾವು ತಿಳಿಯದೇ ಇರುವ ಸಂಗಿತಿಗಳಲ್ಲಿ ನಂಬುತ್ತೇವೆ. ನೀವು ತಿಳಿಯದೇ

ಇರುವಂಥದ್ದು ನಿನ್ನನ್ನು ಕೊಲ್ಲಬಹುದು. ನಮ್ಮ ಸಂಸ್ಕೃತಿಯು ತನ್ನ ಕಣ್ಣುಗಳಿಂದ ಕೇಳುತ್ತದೆ ಮತ್ತು ಅದರ ಭಾವನೆಗಳಿಂದ ಯೋಚಿಸುತ್ತದೆ. ರಾಜಕೀಯ ಸರಿಯಾಗಿರುವಿಕೆಯು ನಮ್ಮನ್ನು ನಿಯಂತ್ರಿಸುತ್ತದೆ. "ಆದುದರಿಂದ ನಂಬಿಕೆಯು ಕೇಳು ವದರಿಂದ ಬರುತ್ತದೆ ಮತ್ತು ಕೇಳುವಿಕೆಯು ದೇವರ ವಾಕ್ಯದಿಂದ ಬರುತ್ತದೆ" (ರೋಮಾಪುರ 10:17) ಎಂದು ಪರಿಶುದ್ಧ ಬರಹಗಳು ಹೇಳುತ್ತವೆ. ನಮ್ಮ ನಂಬಿಕೆಯು ತಪ್ಪಾದ ಮೂಲದಿಂದ ಬಂದಿರುತ್ತದೆ: ಇದು ನಮ್ಮ ಹೆಚ್ಚಾದ ಮೂರ್ಖತನವನ್ನು ವಿವರಿಸುತ್ತದೆ.

ನಾವು ತಪ್ಪಾಗಿದ್ದೇವೆಂದು ನಾವು ತಿಳಿದಿರುವ ಸಂಗತಿಗಳಲ್ಲಿ ನಾವು ನಂಬುತ್ತೇವೆ. ಮಾದಕ ದ್ರವ್ಯಗಳಿಂದ ಯಾವನು ತನ್ನನ್ನು ಕೊಂದುಕೊಳ್ಳುವನು, ಮಿತಿಮೀರಿದ ಭಾರವುಳ್ಳವನಾಗಿರುವನು, ಇಲ್ಲವೇ ತನ್ನ ವೈದ್ಯನ ಅಪ್ಪಣೆಗಳನ್ನು ಮೀರುವನು? ನಾವೇ ನಮ್ಮ ಅತೀಕೆಟ್ಟ ವೈರಿಗಳಾಗಿದ್ದೇವೆ. ನಂಬಿಗಸ್ತನಾಗಿರುವದಕ್ಕಿಂತಲೂ ಹೆಚ್ಚಾಗಿ ಮತಾಂಧನಾಗಿರುವುದು ಸುಲಭವಾಗಿದೆ. ನಂಬಿಕೆಯು ನಿಮ್ಮನ್ನು ಮೇಲಕ್ಕೆತ್ತಿ ಹಿಡಿಯದಿದ್ದರೆ, ಅದಕ್ಕೆ ಅಂಟಿಕೊಂಡಿರಬೇಡ. ತಾವು ಕೆಟ್ಟವರು ಎಂದು ತಿಳಿದುಕೊಂಡ ಜನರಿಂದ ಪರಲೋಕವು ತುಂಬಿಕೊಂಡಿರುವುದು; ತಾವು ಒಳ್ಳೆಯವರೆಂದು ತಿಳಿದಿರುವ ಜನರಿಂದ ನರಕವು ತುಂಬಿ ಹೋಗುವುದು.

ನಾವು ಇನ್ನೂ ತಿಳಿಯದಿರುವಂಥದ್ದನ್ನು ತಿಳಿದಿರುವೆವೆಂದು ಯೋಚಿಸುವ ಸಂಗತಿಗಳಲ್ಲಿ ನಾವು ನಂಬುವೆವು. ಭೂತಕಾಲದಲ್ಲಿದ್ದವರು ಏನನ್ನೂ ತಿಳಿದಿರಲಿಲ್ಲ, ಆದರೆ ವರ್ತಮಾನ ಕಾಲದಲ್ಲಿ ಇರುವವರು ಪ್ರತಿಯೊಂದನ್ನೂ ತಿಳಿದಿರುವವರು ಎಂದು ಸಂಸ್ಕೃತಿಯು ಹೇಳುತ್ತದೆ. ನೀವೆಷ್ಟು ಮೂರ್ಖರಾಗಬಹುದಲ್ಲವೇ? ನಮ್ಮ ಕನಸಿನ ರಾಜ್ಯದ ಇಪ್ಪತ್ತನೆಯ ಶತಮಾನವು ಅದು ಪ್ರಾರಂಭವಾಗಿದ್ದಕ್ಕಿಂತ - ಹೆಚ್ಚು ಕೆಟ್ಟದ್ದಾಗಿ ಅಂತ್ಯಗೊಂಡಿತು. ಎಲ್ಲ ಉತ್ತರಗಳು ತಮ್ಮಲ್ಲಿವೆ ಎಂದು ಹೇಳುವವರಲ್ಲಿ ಅವು ಇರುವದಿಲ್ಲ!

ನಾವು ನಂಬುವಂತೆ ನಾವಿರುವದರಿಂದ, ನಾವು ಅವಸರದಿಂದ ನಾವು ನಂಬುವದರ ಬಗ್ಗೆ ಜಾಗರೂಕತೆಯಿಂದಿರಬೇಕು. ನಮ್ಮ ಸಂಸ್ಕೃತಿಯು ಅತಿಶಯವಾಗಿ ಅಂತರ್ದೃಷ್ಟಿ, ಯೋಗರಹಸ್ಯ, ಮನೋವಿಜ್ಞಾನ, ಭಾವನೆಗಳು ಮತ್ತು ತಕ್ಷಣದ ವಾಸಿಯಾಗುವಿಕೆಗಳ ಮೇಲೆ ಅವಲಂಭಿಸಿರುತ್ತದೆ. ಈ ಪರಿಹಾರಗಳು ಕೆಟ್ಟ ವಿಷಯಗಳನ್ನು ಇನ್ನೂ ಹೆಚ್ಚು ಕೆಟ್ಟವುಗಳನ್ನಾಗಿ ಮಾಡುತ್ತವೆ. "ಬಿಸಿಯಾದ ಹಾರಿಹೋಗುವ ಧೂಳಿಕಣಗಳು" ನಮ್ಮ ವಿಶ್ವಾಸವಾಗಿರಬಾರದು. ನಮ್ಮ ಸ್ವಂತ ನಾಶನಕ್ಕೆ ನಮ್ಮ ಮನಸ್ಸುಗಳಿಗೆ ಆಹಾರ ಉಣ್ಣಿಸದೇ ನಮ್ಮ ಹೃದಯಗಳನ್ನು ಬೆಚ್ಚಗೆ ಮಾಡುತ್ತಿರುವೆವು. ನಾವು ಸಂಗತಿಗಳನ್ನು ನಂಬುತ್ತೇವೆ. "ಅದು ಒಳ್ಳೆಯದಾಗಿ ಭಾವಿಸಿದರೆ, ಅದನ್ನು ಮಾಡಿರಿ" ಎಂಬುದು ಒಳ್ಳೆಯದಾಗಿ ಕೇಳಿಸಬಹುದು, ಆದರೆ ಅದು ಒಂದು ಕೆಟ್ಟ ನಂಬಿಕೆಯಾಗಿದೆ. ನೀವೆಂದೂ ನಂಬಿಕೆಯನ್ನು ಕಳೆದುಕೊಳ್ಳಬೇಡಿರಿ - ಒಂದು ವಿಶ್ವಾಸವನ್ನು ಇನ್ನೊಂದು ವಿಶ್ವಾಸಕ್ಕಾಗಿ ಬದಲಾಯಿಸಿರಿ. ಭೂಲೋಕದಲ್ಲಿ ನಂಬಿಕೆಯು ಅತೀಯಾದ ವ್ಯಾವಹಾರಿಕ ಸಂಗತಿಯಾಗಿದೆ. ನಂಬಿಕೆಯು ಜೀವನಕ್ಕೆ ಮಾರ್ಗವೂ ಹಾಗೂ ಜೀವಿಸುವದಕ್ಕೆ ಮಾರ್ಗವೂ ಎರಡೂ ಆಗಿದೆ. ನಂಬಿಕೆಯ ಜನರು ತಮ್ಮ ವಿಶ್ವಾಸವನ್ನು ಜೀವಿಸುವರು.

ಆದುದರಿಂದ, ಸತ್ಯದ ಮೇಲೆ ಮಹಾ ಬೆಲೆಯು ಇಡಲ್ಪಡತಕ್ಕದ್ದು. "ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು" (ಯೋಹಾನ 8:32); "ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ

ಹೊರತು ಯಾರು ತಂದೆಯ ಬಳಿಗೆ ಬರುವದಿಲ್ಲ" (ಯೋಹಾನ 14:6). "ಪರಿಪೂರ್ಣ ಸತ್ಯ ಇರುವದಿಲ್ಲ" ಎಂಬ ವಿಚಾರವನ್ನು ಸ್ವೀಕರಿಸುವುದು ಆತ್ಮಹತ್ಯೆ ಮಾಡಿಕೊಳ್ಳು ವಂಥದ್ದಾಗಿದೆ! ಜೀವಿತವು ಸತ್ಯದ ತಳಹದಿಯ ಮೇಲೆ ಇರಬೇಕು - ಸತ್ಯದ ಮೇಲೆ ಜೀವಿ ಸಲ್ಪಡತಕ್ಕದ್ದು. ಜೀವನದ ಉದ್ದೇಶವು ಸತ್ಯಕ್ಕಾಗಿ ಅನ್ವೇಷಣೆಯಾಗಿದೆ. "ಸತ್ಯವನ್ನು ... ಕೊಂಡುಕೋ, ಮತ್ತು ಅದನ್ನು ಮಾರಿಬಿಡಬೇಡ" (ಜ್ಞಾನೋಕ್ತಿ 23:23). ಸಮಾಜವು ಸತ್ಯದಿಂದ ಮಾತ್ರವೇ ಅಸ್ತಿತ್ವದಲ್ಲಿರಬಹುದು. ಸತ್ಯವು ನಮ್ಮ ವಿಶ್ವಾಸವಾಗಿರತಕ್ಕದ್ದು. ವಿಶ್ವಾಸವು "ನಿಮ್ಮ ಇಡೀ ಭಾರವನ್ನು ನೀವು ಹಾಕುವಂಥದ್ದಾಗಿರಬೇಕು." ಸತ್ಯವು ಮಾತ್ರವೇ ಅರ್ಹತೆಯುಳ್ಳದ್ದಾಗಿರುತ್ತದೆ. ವಿಶ್ವಾಸವು "ನನ್ನ ವಿಶ್ವಾಸದಲ್ಲಿ" ಇರುವದಿಲ್ಲ; ವಿಶ್ವಾಸವು ಸತ್ಯದಲ್ಲಿರುತ್ತದೆ. ವಿಶ್ವಾಸದ ತಿರುಳು ಪೂರ್ಣವಾದ ನಂಬಿಕೆಯೊಂದಿಗೆ ಇರುವುದಾಗಿದೆ. ವಿಶ್ವಾಸವು ಎಲ್ಲಾ ಉತ್ತರಗಳನ್ನು ನಮಗೆ ಕೊಡುವದಿಲ್ಲ; ಉತ್ತರಗಳಿಲ್ಲದೇ ಜೀವಿಸುವದಕ್ಕೆ ನಂಬಿಕೆಯು ನಮಗೆ ಅಪ್ಪಣೆ ಕೊಡುತ್ತದೆ. ವಿಶ್ವಾಸದ ಜೀವಿತವು ನಿತ್ಯಜೀವವನ್ನು ಸಂಪಾದಿಸುವದಿಲ್ಲ; ಅದು ನಿತ್ಯಜೀವ*ವಾಗಿರುತ್ತದೆ.* ಪ್ರತೀ ದಿನ ನಿನಗೆ ಸುವಾರ್ತೆಯನ್ನು ಪ್ರಸಂಗಿಸಿಕೋ. ನಿನ್ನ ಸ್ವಂತ ಪ್ರಸಂಗಿಸುವಿಕೆಯನ್ನು ನಂಬು! ವಿಶ್ವಾಸ ಅಂದರೆ ಬೇರಾವುದನ್ನಲ್ಲ ಆದರೆ ನೀನು ದೇವರನ್ನು ಬಯಸುವಿ ಎಂದರ್ಥವಾ ಗುತ್ತದೆ. ವಿಶ್ವಾಸದಂತೆ ಯಾವುದೂ ದೇವಜನರ ಜೀವಿತಗಳನ್ನು ಬದಲಾಯಿಸುವದಿಲ್ಲ ಮತ್ತು ಪ್ರೌಢಾವಸ್ಥೆಗೆ ತರುವದಿಲ್ಲ. ವಿಶ್ವಾಸವಿಲ್ಲದೇ ನೀನು ನಂಬಿಗಸ್ತನಾಗಿರಲಾರಿ. ಸುಮ್ಮನೇ ಅನುದಿನವೂ ನಂಬಿಗಸ್ತನಾಗಿರು.

ಯೋಗ್ಯವಾದ ಕ್ರಮದಲ್ಲಿ, ನಮಗೆ ಘಟನೆಗಳೂ, ನಂಬಿಕೆಯೂ ಮತ್ತು ಭಾವನೆಗಳೂ ಇರುತ್ತವೆ. ಘಟನೆಗಳು ವಿಶ್ವಾಸಕ್ಕಿಂತ ಮೊದಲು ಬರುತ್ತವೆ, ವಿಶ್ವಾಸವು ಭಾವನೆಗಳಿಗಿಂತ ಮೊದಲು ಬರುತ್ತದೆ. ವಿಶ್ವಾಸದ ಉದ್ದೇಶವು ಘಟನೆಯಾಗಿದೆ, ಆದರೆ ಭಾವಿಸುವುದಾಗಿರುವದಿಲ್ಲ ನೀವು "ವಿಶ್ವಾಸಕ್ಕೆ ನಮ್ಮ ಭಾವನೆಯನ್ನು ಭಾವಿಸುವದಿಲ್ಲ." ನಂಬಿಕೆಯು ಘಟನೆಯ ಮೇಲೆ ಒಂದು ಕಣ್ಣಿಟ್ಟಿರುತ್ತದೆ. ಇದು ವಿಶ್ವಾಸವನ್ನು ಸುರಕ್ಷಿತ ವಾಗಿಡುತ್ತದೆ. ಭಾವನೆಯ ಮೇಲೆ ಕೇಂದ್ರೀಕರಿಸಲು ನಂಬಿಕೆಯು ತನ್ನ ದೃಷ್ಟಿಯನ್ನು ತೆಗೆಯುವಾಗ, ನಂಬಿಕೆ ಮತ್ತು ಭಾವನೆ ಕಷ್ಟಕ್ಕೊಳಪಡುತ್ತವೆ. ಕುಟುಂಬದ ಮೇಲೆ ಕೇಂದ್ರೀಕರಿಸಬೇಡ; ದೇವರ ಮೇಲೆ ಕೇಂದ್ರೀಕರಿಸು! ಕುಟುಂಬವು ಎಂದೂ ವಿಗ್ರಹವಾಗಬಾರದು. ನಂಬಿಕೆಯು ದೇವರ ವಾಕ್ಯದ ಮೇಲೆ ಆತನನ್ನು ತೆಗೆದು ಕೊಳ್ಳುತ್ತದೆ. ನಿಮಗೆ ಆರೋಗ್ಯಕರ ನಂಬಿಕೆಯಿದೆಯೋ ಇಲ್ಲವೇ ಅನಾರೋಗ್ಯಕರ ನಂಬಿಕೆಯಿದೆಯೋ?

## ವಿಶ್ವಾಸವು ನಂಬುತ್ತದೆ

ನಂಬಿಕೆಯು ಮಾನಸಿಕ ಒಪ್ಪಿಗೆ, ಪೂರ್ಣ ಹೃದಯದ ನಂಬಿಕೆ, ಸಂಪೂರ್ಣ ವಿಧೇಯತೆಯಾಗಿದೆ. ದೇವರು ಹೇಗೆ ಮಹಿಮೆಯುಳ್ಳವನೂ ಒಳ್ಳೆಯವನೂ ಆಗಿರುವನೆಂದು ನಾವು ನಿಜವಾಗಿಯೂ ಗ್ರಹಿಸಿಕೊಳ್ಳುವಾಗ, ನಾವು ನಮ್ಮ ಜೀವಿ ತಗಳನ್ನು ಆತನಿಗೆ ಕೊಡುವೆವು. ನಾವು ನಿಜವಾಗಿಯೂ ದೇವರನ್ನು ತಿಳಿದಿದ್ದರೆ, ನಾವು ಪಾಪ ಮಾಡುತ್ತಿರಲಿಲ್ಲ. ದೇವರು ದೇವರಾಗಿದ್ದಾನೆ, ಮತ್ತು ಮನುಷ್ಯನು ದೇವ ರಾಗಿರುವದಿಲ್ಲ. *ವಾಸ್ತವಾಂಶ:* ದೇವರು ದೇವರಾಗಿರುತ್ತಾನೆ. *ನಂಬಿಕೆ:* ಆತನು ನನ್ನ ದೇವರಾಗಿರುತ್ತಾನೆ! ನಂಬುವಲ್ಲಿ, ಮನುಷ್ಯನು ತನ್ನ ಮಾನವತೆಯನ್ನು ಕೇಳುತ್ತಾನೆ. ಮನುಷ್ಯನು ಪಾಪದಲ್ಲಿ ಕಳೆದು ಹೋಗಿದ್ದಾನೆ, ಸಹಾಯಹೀನನಾಗಿದ್ದಾನೆ, ನರಕಕ್ಕೆ ದಂಡಿಸಲ್ಪಟ್ಟಿದ್ದಾನೆ. ಆತ್ಮಿಕತೆಯ ತಿರುಳು ಅವಲಂಭನೆಯಾಗಿರುತ್ತದೆ. ಸಹಾಯಕ್ಕಾಗಿ,

ರಕ್ಷಣೆಗಾಗಿ ಮನುಷ್ಯನು ತನ್ನ ಹೊರಗೆ ನೋಡತಕ್ಕದ್ದು. ನಂಬುವದಕ್ಕಾಗಿ ಮನುಷ್ಯನು ತನ್ನನ್ನು ತಗ್ಗಿಸಿಕೊಳ್ಳತಕ್ಕದ್ದು. ಮನುಷ್ಯನು ತನ್ನನ್ನು ತಗ್ಗಿಸಿಕೊಳ್ಳುವವರೆಗೆ, ಅವನು ನಂಬಲಾರನು. ಆದುದರಿಂದಲೇ ಕೆಲವು ಸಲ ದೇವರಿಗೆ ವಿಧೇಯನಾಗುವುದಕ್ಕಿಂತ ದೇವರನ್ನು ನಂಬುವುದು ಹೆಚ್ಚು ಕಷ್ಟಕರವಾದದ್ದಾಗುತ್ತದೆ. ನಮ್ಮ ಜೀವಿತಗಳನ್ನು ಕ್ರಿಸ್ತನಿಗೆ ಸಮರ್ಪಿಸುವದಕ್ಕಿಂತ ಹೆಚ್ಚಾಗಿ ನಾವು ತಿಳಿದಿರುವದನ್ನು ನಂಬುವುದು ಮತ್ತು ಮಾಡುವುದು ಸುಲಭವಾಗಿರುತ್ತದೆ. ನಂಬಿಕೆಯು "ವ್ಯವಹಾರದ ವಿಷಯವಾಗಿರುವದಿಲ್ಲ." ದೇವರೊಂದಿಗೆ ಗುತ್ತಿಗೆಯಾಗಿರುವದಿಲ್ಲ. ನಂಬಿಕೆಯು ಸಮರ್ಪಣೆಯಾಗಿರುತ್ತದೆ. ನಂಬಿಕೆಗೆ ತನ್ನಷ್ಟಕ್ಕೇ ಅರ್ಹತೆ ಇರುವದಿಲ್ಲ. *ದೇವರಿಗೆ ಮಹಿಮೆಯಾಗಲಿ!*

ನಂಬಿಕೆಯಿರುವುದು ಅಂದರೆ ಪ್ರತಿಯಾಗಿ ಕೇವಲ ಅರ್ಥಕೊಡುವಂಥದ್ದರಲ್ಲಿ ಮುಂದಾಗಿ ವಿಶ್ವಾಸಿಸುವುದು ಆಗಿರುತ್ತದೆ. *ಯೋಚಿಸಿರಿ!* ಭಾನುವಾರದಂದು ಏನು ಸಂಭವಿಸುವುದೆಂಬುದನ್ನು (ಪುನರುತ್ಥಾನ) ಶಿಷ್ಯರು ತಿಳಿದಿದ್ದರೆ, ಅವರು ಶುಕ್ರವಾರವನ್ನು (ಶಿಲುಬೆಗೆ ಹಾಕಲ್ಪಡುವದನ್ನು) ನಿಭಾಯಿಸುತ್ತಿದ್ದರು. ಇಸಾಕನ ಮುಖಾಂತರ ಭವಿಷ್ಯವು ನೆರವೇರುವುದಕ್ಕಾಗಿ ದೇವರ ವಾಗ್ದಾನವನ್ನು ತಿಳಿದಿದ್ದರಿಂದ ಅಬ್ರಹಾಮನು ಇಸಾಕನನ್ನು ಬಿಟ್ಟುಕೊಡಲು ಮಾನಸಿಕವಾಗಿ ಸಿದ್ಧನಾಗಿದ್ದನು. "ದೇವರೇ, ಅವನನ್ನು ಕೊಲ್ಲಬೇಕೆಂದು ನೀನು ಹೇಳಿರುವಿ. ವಿಧೇಯನಾಗುವುದು ನನ್ನ ಕೆಲಸ" ಎಂದು ಅಬ್ರಹಾಮನು ನಿಶ್ಚಯವಾಗಿ ಯೋಚಿಸುತ್ತಿರ ಬಹುದು. "ನಾನು ಕೂಡಲೇ ಅವನನ್ನು ಕೊಲ್ಲುವೆನು. ಅವನನ್ನು ಪುನಃ ಜೀವಿಸುವಂತೆ ಮಾಡುವುದು ನಿನ್ನ ಕೆಲಸ" ಎಂದೂ ಹೇಳಿರಬಹುದು (ಆದಿಕಾಂಡ 22; ಇಬ್ರಿಯ 11). ಹಿಂದಿನ ಕಾಲದಲ್ಲಿ ಜನರಲ್ಲಿ ಎಷ್ಟು ಅಲ್ಪ ವಿಶ್ವಾಸವಿತ್ತೆಂಬುದನ್ನು ತಿಳಿಯುವುದು ನಮಗೆ ಸುಲಭವಾಗಿದೆ. ಅದಿರಲಿ, ಒಂದು ವರ್ಷದ ಹಿಂದೆ ಯಾವುದರ ಬಗ್ಗೆ ನೀನು ಅಷ್ಟು ಚಿಂತೆಯುಳ್ಳವನಾಗಿದ್ದೀ? ನಮ್ಮ ಸ್ವಂತ ಜೀವಿತಗಳಲ್ಲಿಯೇ ಹಿಂದಕ್ಕೆ ನೋಡುವಾಗ, ನಮ್ಮ ಅಲ್ಪತೆಯ ಬಗ್ಗೆ, ನಮ್ಮ ವಿಶ್ವಾಸದ ಕೊರತೆಯ ಬಗ್ಗೆ, ನಮ್ಮ ಸೋಲುಗಳ ಬಗ್ಗೆ ನಮಗೆ ನಾಚಿಕೆಯಾಗುವದಿಲ್ಲವೇ? ನಾವು ಇರುವಂಥದ್ದು ಯಾವಾಗಲೂ ನಾವಿರಬೇಕಾದದ್ದರೊಂದಿಗೆ ಹೋರಾಡುವುದಾಗಿರುತ್ತದೆ, "ಅಲ್ಪ ವಿಶ್ವಾಸಿಗಳೇ!" ಎಂದು ಕ್ರಿಸ್ತನು ಹೇಳುತ್ತಾನೆ (ಮತ್ತಾಯ 6:30) ಮತ್ತು ಆತನಿಗೆ ನಾವು "ನಮ್ಮ ವಿಶ್ವಾಸವನ್ನು ಹೆಚ್ಚಿಸು!" ಎಂದು ಹೇಳುತ್ತೇವೆ (ಲೂಕ 17:5) ದೇವರನ್ನು ನಂಬಬಹುದೋ? ನಾನು ನಿಜವಾಗಿಯೂ ನಂಬುತ್ತೇನೋ? ನಂಬಿಕೆಯು ಲೋಕಕ್ಕೆ ನಿತ್ಯವಾದ ವಿಷಯವನ್ನು ಕೊಡುತ್ತದೆ: ಪ್ರತಿಯೊಂದು ಕ್ಷಣವು ದೇವರ ದೇವರಿಂದ ಬಂದ ಪ್ರಕಟಣೆಯಾಗಿದೆ. ನಂಬಿಕೆಯಿಂದ - ಇಂದು ಜೀವಿಸಲು ಕಲಿತುಕೊಳ್ಳಿರಿ.

ನಂಬಿಕೆಯು ಅಸಾಧ್ಯವಾದದ್ದರಲ್ಲಿ ವಿಶ್ವಾಸಿಸುತ್ತದೆ. ನಮಗೆ ಸರಳವಾದ ಮಗುವಿನಂತಿರುವ ನಂಬಿಕೆಯ ಅಗತ್ಯತೆಯಿದೆ. ಸಾಂತಾಕ್ಲಾಸನಲ್ಲಿ ನಂಬುವದಕ್ಕೆ ಮಕ್ಕಳಿಗೆ ಸಮಸ್ಯೆಯಿರುವದಿಲ್ಲ. ಆದರೆ ಅಸಾಧ್ಯವಾದದ್ದರಲ್ಲಿ ನಂಬುವದಕ್ಕೆ ಬಾಲಿಶಭಾವದ ಅಗತ್ಯತೆ ಇರುವದಿಲ್ಲ. ಮಕ್ಕಳಂತಿರುವುದು ಬಾಲಿಶಭಾವದಿಂದಿರುವದರಿಂದ ಭಿನ್ನವಾಗಿರುತ್ತದೆ. ದೇವರು ಸಾಧ್ಯವಾದವುಗಳ ದೇವರು ಮಾತ್ರವೇ ಆಗಿರದೇ ಅಸಾಧ್ಯಗಳ ದೇವರೂ ಆಗಿರುತ್ತಾನೆ (ಮತ್ತಾಯ 19:26). ಪೇತ್ರನು ನೀರಿನ ಮೇಲೆ ನಡೆದನು, ಆದರೆ ಆಗ ಅವನು ಮುಳುಗಲಿಕ್ಕಿದ್ದನು (ಮತ್ತಾಯ 14:28-31). ತಾನು ಮಾಡುತ್ತಿರುವದನ್ನು ಮಾಡಬಲ್ಲೆನೆಂದು ಅವನು ನಂಬಲಿಲ್ಲ! ದೇವರು ತನ್ನ ಬಲವನ್ನು ಕಳೆದುಕೊಳ್ಳಲಿಲ್ಲ. ನಂಬಿಕೆಯು ಸೋತುಹೋಗಲಿಲ್ಲ. ಪೇತ್ರನು ತನ್ನ ನಂಬಿಕೆಯನ್ನು

ಸಂಶಯಕ್ಕೆ ಬದಲಿಸಿಕೊಂಡನು. ಅವನು ಮುಳುಗಲಿಕ್ಕೆ ಪ್ರಾರಂಭಿಸಿದನು.

ಅಸಾಧ್ಯವಾದದ್ದರಲ್ಲಿ ನಾವೆಲ್ಲರೂ ನಂಬುತ್ತೇವೆ. ನಾವು ಜೀವದಲ್ಲಿ ನಂಬುತ್ತೇವೆ. ಜೀವವನ್ನು ವಿವರಿಸುತ್ತೇವೆ. ಸಾಗರವು ಭೂಮಿಯ ಇನ್ನೊಂದು ಬದಿಯಲ್ಲಿ ಯಾಕೆ ಬಿದ್ದುಹೋಗಬಾರದು? ನೀರು ತನ್ನ ಸ್ವಂತ ಸಮಪಾತಳಿಯನ್ನು ಕಾಯ್ದುಕೊಂಡು ಹೋಗುತ್ತದೆ. ಭೂಮಿಯ ಮೇಲೆ ನಾವೆಲ್ಲಿಯೇ ನಿಲ್ಲಲಿ (ದಕ್ಷಿಣ ತುದಿಯಲ್ಲಿ ನಿಂತರೂ) ನಾವು ಯಾವಾಗಲೂ ಭೂಮಿಯ ಮೇಲ್ಗಡೆಯಲ್ಲಿ ಇರುತ್ತೇವೆ. ಮೂಕ ಜೀವಿಯು ಹೊಲದಲ್ಲಿ ಮೊಟ್ಟೆಯನ್ನ ಹೇಗೆ ಇಡಬಹುದು? ಮನುಷ್ಯನು ಒಂದು ವೇಳೆ - ಬಹಳ ಪ್ರಯತ್ನದಿಂದ ಒಂದು ಮೊಟ್ಟೆಯನ್ನು ಮಾಡಿದರೂ - ಅದು ಮೊಟ್ಟೆಯನ್ನು ಮರಿಮಾಡಲಾರದು. 747 (ಜಂಬೋಜೆಟ್) ಹೇಗೆ ಹಾರುತ್ತದೆ? ಬೀಜವು ಜೀವಿಸಲು ಹೇಗೆ ಸಾಯುತ್ತದೆ? ನಮ್ಮ ದೇವರು ಸೃಷ್ಟಿಸ ಬಲ್ಲಾತನು ಪುನರುತ್ಥಾನಗೊಳಿಸಬಲ್ಲನು! ನಂಬಿಕೆಯುಳ್ಳ ಜನರು ದೇವರು ರೂಪಿಸಿದ, ಕಟ್ಟಿದವನು ಆಗಿರುವ ಪಟ್ಟಣಕ್ಕಾಗಿ ನೋಡುವರು (ಇಬ್ರಿಯ 11:10). ವಿಶ್ವಾಸದ ಪ್ರಾರ್ಥನೆಯು ಪರ್ವತಗಳನ್ನು ಚಲಿಸಬಲ್ಲದು ಎಂದು ಯೇಸುವು ಹೇಳಿದ್ದಾನೆ (ಮತ್ತಾಯ 17:20; 1 ಕೊರಿಂಥ 13:2). ಆತನು ಸ್ಮರಣಾರ್ಥಕವಾದ ಹೋರಾಟಕ್ಕಾಗಿ ಕೇಳಿಕೊಳ್ಳುತ್ತಿರುವದಿಲ್ಲ. ವಿಷಯವು "ಪರ್ವತಗಳನ್ನು ಚಲಿಸುವಂತೆ ಮಾಡುವುದು" ಆಗಿರುವದಿಲ್ಲ; ವಿಷಯವು "ನನ್ನನ್ನು ಚಲಿಸುವುದು" ಆಗಿದೆ. ದೇವರು ಬದಲಾಯಿಸಬಲ್ಲನು, ರಕ್ಷಿಸಬಲ್ಲನು ಮತ್ತು ನನ್ನನ್ನು ಉಪಯೋಗಿಸಬಲ್ಲನು!

ಸ್ವಭಾವದಿಂದ, ವಿಶ್ವಾಸವು ಗಂಡಾಂತರವನ್ನು ಒಳಗೊಂಡಿರುತ್ತದೆ. ವಿಶ್ವಾಸವು ಪರೀಕ್ಷೆಯನ್ನು ಕೇಳುತ್ತದೆ. ವರ್ತಮಾನ ಕಾಲದಲ್ಲಿ ತೃಪ್ತಿಹೊಂದಲು ನಮ್ಮ ಭವಿಷ್ಯವನ್ನು ಗಂಡಾತರಕ್ಕಿಟ್ಟುಕೊಳ್ಳುತ್ತೇವೆ. ಅಬ್ರಹಾಮನು ಇಸಾಕನನ್ನು ನಿಯಂತ್ರಿಸುವ ಮೊದಲು ಇಷ್ಮಾಯೇಲನನ್ನು ಹೇಗೆ ನಿಯಂತ್ರಿಸಬೇಕೆಂಬುದನ್ನು ಕಲಿಯಬೇಕಾಗಿತ್ತು. ನಮ್ಮದು "ನಂಬಿಕೆಯ ಬಲ," ಆದರೆ "ಚಿತ್ತದ ಬಲ" ಆಗಿರುವದಿಲ್ಲ. ದೇವರು ಶಿಲುಬೆಯ ಬಳಿಯಲ್ಲಿ ಪ್ರತಿಯೊಂದು ಸಾಹಸ ಮಾಡಿದನು; ನಂಬಿಕೆಯಿಂದ ನಾವು ಪ್ರತಿಯೊಂದರ ಸಾಹಸ ಮಾಡುವೆವು. ನಂಬಿಕೆಯು ಸಂಶಯಕ್ಕೆ ಎಡೆಕೊಡುವದೆಂದೂ ಇದರ ಅರ್ಥವಾಗುತ್ತದೆ. ಪರೀಕ್ಷಿಸಲ್ಪಡದ ವಿಶ್ವಾಸವಿರುವುದು ಬೆಲೆಯಿಲ್ಲದ್ದಾಗಿದೆ. ಕುರುಡು ನಂಬಿಕೆಯಲ್ಲಿಯಕ್ಕಿಂತ ಪ್ರಾಮಾಣಿಕವಾದ ಸಂಶಯದಲ್ಲಿ ಹೆಚ್ಚು ಧರ್ಮವಿರುತ್ತದೆ. ಸ್ನಾನಿಕನಾದ ಯೋಹಾನನಿಗೆ ಅವನ ಸಂಶಯಗಳು ಇದ್ದವು (ಮತ್ತಾಯ 11:3). ನೀವು ನಿಮ್ಮ ನಂಬಿಕೆಯ ಬಗ್ಗೆ ಸಂಶಯ ಪಡಬಹುದು, ಆದರೆ ನಿಮ್ಮ ಸಂಶಯಗಳನ್ನು ಎಂದೂ ನಂಬಬೇಡಿರಿ! ವಿಶ್ವಾಸದ ವಿರೋಧವು ಸಂಶಯವಲ್ಲ - ಅದು ಅವಿಶ್ವಾಸವಾಗಿದೆ (ಇಬ್ರಿಯ 3:7-19). ಕೆಲವೊಂದನ್ನು ತಿಳಿಯಲು ಪ್ರತಿಯೊಂದನ್ನೂ ನಾವು ತಿಳಿಯಬೇಕಾಗಿರುವದಿಲ್ಲ.

ತನ್ನ ಸಂಶಯಗಳಿದ್ದರೂ ಸ್ನಾನಿಕನಾದ ಯೋಹಾನನ ಬಗ್ಗೆ ಯೇಸುವು ಅಗ್ರಾಹ್ಯವಾದ ಹೇಳಿಕೆ ಕೊಟ್ಟನು: "... ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡವನು ಎದ್ದಿಲ್ಲ! ..." (ಮತ್ತಾಯ 11:7-11). ತನ್ನಲ್ಲಿ ನಿಶ್ಚಿತತೆಯಿಲ್ಲದ ವಿಶ್ವಾಸವು ವಿಶ್ವಾಸವಾಗಿರಲಾರದು. ದೇವರಿಲ್ಲದೇ ಜೀವಿಸಲು ಮತ್ತು ಸಾಯಲು ಪ್ರಯತ್ನಿಸುವುದು ಅಪಾಯಕಾರಿಯಾದದ್ದಾಗಿರುತ್ತದೆ. ಯಾವುದನ್ನಾದರೂ ನೀವು ಗಂಡಾಂತರಕ್ಕೆ ಈಡು ಮಾಡದಿದ್ದರೆ, ನೀವು ಪ್ರತಿಯೊಂದನ್ನೂ ಗಂಡಾಂತರಕ್ಕೀಡು ಮಾಡುವಿರಿ. ಕ್ರೈಸ್ತರು ಪ್ರತಿದಿನ "ತಮ್ಮ ವಿಶ್ವಾಸವನ್ನು ಸರಿಯಾಗಿ ಇಟ್ಟುಕೊಳ್ಳುವರು" ವಿಶ್ವಾಸವು ಪರಿಪೂರ್ಣವಾದ ಪರಿಸರಗಳ ವಾಗ್ದಾನವಾಗಿರುವದಿಲ್ಲ. ಎಂದೂ ತ್ಯಜಿಸಿದ

ಇಲ್ಲವೇ ಕೈಬಿಡದ ನಮ್ಮ ದೇವರಲ್ಲಿ ನಂಬಿಕೆಯಿಡುತ್ತದೆ (ಇಬ್ರಿಯ 13:5).

## ನಂಬಿಕೆಯು ಕಾರ್ಯ ಮಾಡುತ್ತದೆ

ಪದದ ಯಾವುದೇ ನಿರೂಪಣೆಯಲ್ಲಿ "ನಂಬಿಕೆ"ಯು ಕಾರ್ಯ ಮಾಡುತ್ತದೆ. ನಮ್ಮ ದೇವರು ಕಾರ್ಯ ಮಾಡುತ್ತಾನೆ; ನಮ್ಮ ರಕ್ಷಕನಾಗಿರಲು ಯೇಸುವಿಗಾಗಿ ಆತನ ಯೋಜನೆಯು ಕಾರ್ಯಮಾಡುತ್ತದೆ. ಸ್ಪಷ್ಟ ಬೋಧನೆಯು ಕಾರ್ಯಮಾಡುತ್ತದೆ. ನಂಬಿಕೆಯು ಬಲವುಳ್ಳದ್ದು. ವಿಧೇಯವಾದದ್ದು ಆಗಿರುತ್ತದೆ. "ಕೃತಿಗಳಿಲ್ಲದ ನಂಬಿಕೆಯು ಸತ್ತು ಹೋದದ್ದಾಗಿದೆ" (ಯಾಕೋಬ 2:17-26). ಇಬ್ರಿಯ 11ರಲ್ಲಿ ನಿಜವಾದ ವೀರನು ಬೈಬಲಿನ ಪಾತ್ರವಲ್ಲ - ವೀರನು ನಂಬಿಕೆಯಾಗಿದೆ. ನಂಬಿಕೆಯು ಭಿನ್ನತೆ ಮಾಡಿತು. ಪಾಪಕ್ಕೆ ವಿರುದ್ಧವಾದದ್ದು ಒಳ್ಳೆಯತನವಲ್ಲ, ಆದರೆ ನಂಬಿಕೆಯಾಗಿದೆ. ಅದೇ ರೀತಿಯಲ್ಲಿ, ಪಾಪದ ತಿರುಳು ದುರ್ಗುಣವಾಗಿರುವದಿಲ್ಲ, ಆದರೆ ಅವಿಶ್ವಾಸವಾಗಿದೆ, ಕ್ರೈಸ್ತರಲ್ಲದವರನ್ನು ಕ್ರೈಸ್ತರಂತೆ ಜೀವಿಸಲು ಮಾಡುವಂತೆ ಪ್ರಯತ್ನಿಸುವಲ್ಲಿ ನಮ್ಮ ಸೋಲುವಿಕೆಯನ್ನು ಇದು ವಿವರಿಸುತ್ತದೆ. *ನಂಬಿಕೆಯು ಕಾರ್ಯಮಾಡುತ್ತದೆ!* ನಾವು "ನಂಬಿಕೆಯ ಕೆಲಸದವರಾಗಿರತಕ್ಕದ್ದು." "ನಂಬಿಕೆಯ ಕಾರ್ಯಗಳನ್ನು" ನಾವು ಮಾಡುತ್ತೇವೆ; "ಕಾನೂನಿನ ಕಾರ್ಯಗಳನ್ನಲ್ಲ" ಒಬ್ಬ ವ್ಯಕ್ತಿಯಲ್ಲಿ ನಂಬಿಕೆಯು ಸಮರ್ಪಣೆಯನ್ನು ಕೇಳುತ್ತದೆ (ಲೂಕ 6:46; ಯೋಹಾನ 14:15). ನಂಬಿಕೆಯು ಕೇವಲ ಮಾರ್ಗವಾಗಿದೆ: "ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ" (ಇಬ್ರಿಯ 11:6).

ನಂಬಿಕೆಯು ಅನುದಿನವಾಗಿದೆ. ನಿನ್ನೆಯ ದಿವಸ ದೇವರು ಕೊಟ್ಟ ಕೃಪೆಯು ಇಂದು ನಮ್ಮನ್ನು ಉಳಿಸುವದಿಲ್ಲ. ನಾಳೆಗಾಗಿ ದೇವರು ಎಂದೂ ಬಲವನ್ನು ಕೊಡುವುದಿಲ್ಲ - ಈ ದಿನಕ್ಕಾಗಿ ಮಾತ್ರವೇ ಕೊಡುತ್ತಾನೆ. ಅರಣ್ಯದಲ್ಲಿ ಮನ್ನವು ಅನುದಿನವೂ ಕೂಡಿಸಲ್ಪಡುತ್ತಿತ್ತು, ರಕ್ಷಿಸುವ ಪ್ರೀತಿ, ಜೀವಿಸುವ ಪ್ರೀತಿ ಅನುದಿನದ್ದಾಗಿದೆ. ನಂಬಿಕೆಯನ್ನು ಸಂಗ್ರಹಿಸಿ ಇಡಲು ಇಲ್ಲವೇ ಮುಂದಕ್ಕೆ ತೆಗೆದು ಹೋಗುವುದು ಆಗಿರುವದಿಲ್ಲ. ಕ್ರೈಸ್ತ ಜೀವಿತವು ಯಾವಾಗಲೂ ಸುಲಭವಾದದ್ದೂ ಸಂತೋಷವುಳ್ಳದ್ದೂ ಆಗಿರುವದಿಲ್ಲ. ಅದು ಬಲಹೀನರಿಗಾಗಿ ಇರುವದಿಲ್ಲ. ಗಲಿಬಿಲಿಗೊಂಡ ತಂದೆಯಂತೆ, "ನಂಬುತ್ತೇನೆ, ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯಮಾಡು" (ಮಾರ್ಕ 9:23, 24) ಎಂದು ಕೂಗಿದಂತೆ ಕೂಗುವೆವು. "ಏನೇ ಆಗಲಿ, ದೇವರೇ ನಾನು ನಿನ್ನವನು!" ಎಂದು ನಾವು ಹೇಳುವೆವು.

***ಬನ್ನಿರಿ, ನನ್ನೊಂದಿಗೆ ನಡೆಯಿರಿ.***

---

ಟಿಪ್ಪಣಿ

[1]1, 4, 5, 6, 7, 8, 10, 11, 13, 16, 17-19, 23-28, 31, 32, 33, 37, 38, 40 ವಚನಗಳನ್ನು ಪ್ರತ್ಯೇಕವಾಗಿ ನೋಡಿ.

© 2009 Truth for Today